# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಹುಣಸೂರು.

## ಸಿ.ಸಿ. ಸಂಖ್ಯೆಃ 620/14

**ಸಾಕ್ಷಿಯನ್ನು ದಿಃ 23.05.2023 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | |
|---|---|---|
| ಹೆಸರು | ಅಮೃತ್ ಎಮ್.ಆರ್ | ಸಿ.ಡಬ್ಲ್ಯೂಃ 28 ಪಿ.ಡಬ್ಲ್ಯೂಃ 14 |
| ತಂದೆಯ ಹೆಸರು | ರಾಜಶೇಖರಯ್ಯ .ಎಮ್ | |
| ವಯಸ್ಸು | 37 ವರ್ಷ | |
| ಕೆಲಸ | ಮ್ಯಾನೇಜರ್ ಐಟಿ ಡಿಪಾರ್ಟಮೆಂಟ್, ಕರ್ನಾಟಕ ಬ್ಯಾಂಕ್ ಮಂಗಳೂರು | |
| ವಾಸಸ್ಥಳ | ಮಂಗಳೂರು | |

ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

ನಾನು 2009 ರಿಂದ 2013 ರ ವರೆಗೆ ನಾನು ಹುಣಸೂರು ಕರ್ನಾಟಕ ಬ್ಯಾಂಕ್ ನಲ್ಲಿ ಜನರಲ್ ಆಫೀಸರ್ ಹಾಗೂ ಅಸಿಸ್ಟಂಟ್ ಮ್ಯಾನೇಜರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಮಗೆ ಅಂದಿನ ಮ್ಯಾನೇಜರ್ ಆದ ಆರೋಪಿ ವಿವಿಧ ರೀತಿಯಲ್ಲಿ ಬ್ಯಾಂಕಿಗೆ ವಂಚನೆ ಮಾಡಿದ್ದಾರೆ ಎಂದು ಗೊತ್ತಾಯಿತು. ಆ ಸಮಯದಲ್ಲಿ ನಾನು ಅಸಿಸ್ಟಂಟ್ ಮ್ಯಾನೇಜರ್ ಆಗಿದ್ದೆ. ಆದ್ದರಿಂದ ಬ್ಯಾಂಕಿನ ಚೆಕ್ ಪಾಸ್ ಮಾಡುವುದು, ಸ್ಟೇಟ್‌ವ್ ಮೆಂಟ್ ಅನ್ನು ಹೆಡ್ ಆಫೀಸ್ ಗೆ ಕಳುಹಿಸುವುದವುದು, ಐಟಿ ಇನ್ನಿತರೆ ರೆಗ್ಯೂಲೆಟರಿ ರಿಟರ್ನ್ ಹಾಗೂ ಬ್ರಾಂಚಿನ ಅಪರೇಷನ್ ನಾನು ನೋಡಿಕೊಳ್ಳುತ್ತಿದ್ದೆ. 2010 ರಲ್ಲಿ ರಾಜಮ್ಮ ಅವರ ಒಂದು ಚೆಕ್ ಡಿಸ್ಕೌಂಟ್ ಕೇಸಿನಲ್ಲಿ ಡಿಸ್ಕೌಂಟ್ ಚಲನ್ ಹಾಗೂ ಡಿಸ್ಕೌಂಟ್ ಚೆಕ್ ಅನ್ನು ನಮಗೆ ನೀಡಿದ್ದು, ಅದರ ಪ್ರಕಾರ ನಾವು ಡಿಸ್ಕೌಂಟ್ ಮಾಡಿ ರಾಜಮ್ಮ ಅವರ ಅಕೌಂಟ್ ಗೆ ಕ್ರೆಡಿಟ್ ಮಾಡಬೇಕಾದರೆ ಅದರಲ್ಲಿ ಹಸ್ತಾಕ್ಷರ ವ್ಯತ್ಯಾಸ ಇರುವುದು ಕಂಡುಬಂದಿರುತ್ತದೆ. ಈ ವಿಷಯವನ್ನು ನಾವು ಮ್ಯಾನೇಜರ್ ಆದ ಆರೋಗೆ ತಿಳಿಸಿದ್ದು, ಆಗ ಆರೋಪಿ ನಮಗೆ ಅವರು ಹಳ್ಳಿ ಜನ ಹಸ್ತಾಕ್ಷರ ವ್ಯತ್ಯಾಸ ಆಗುತ್ತದೆ ನೀವು ಚೆಕ್ ಪಾಸ್ ಮಾಡಿ ಎಂದು ಹೇಳಿದರು. ಆಗ ನಾವು ಆರೋಪಿಗೆ ಅದರ ಜೊತೆ ಕವರಿಂಗ್ ಲೆಟರ್ ಕೊಡಿ ಎಂದು ಕೇಳಿದೇವು. ಆಗ ಆರೋಪಿ ಅದು ನನ್ನ ಬಳಿ ಇದೆ ನಾನು ನೋಡಿರುತ್ತೇನೆ ನೀವು ಚೆಕ್ ಪಾಸ್ ಮಾಡಿ ಎಂದು ಹೇಳಿದರು. ಆಗ ಆರೋಪಿಗೆ ನಾವು ರಾಜಮ್ಮ ಅವರ ಇನ್ನೊಂದು ಸಹಿಯನ್ನು ಸದರಿ ಚೆಕ್ ಮೇಲೆ ಪಡೆಯುವಂತೆ ತಿಳಿಸಿದೇವು. ಆಗ ಆರೋಪಿ ಸದರಿ ರಾಜಮ್ಮ ಅವರು ನನ್ನ ಬಳಿ ಎಲ್ಲಾ ದಾಖಲಾತಿಗಳನ್ನು ಕೊಟ್ಟಿರುತ್ತಾರೆ, ನೀವು ಚೆಕ್ ಪಾಸ್ ಮಾಡಿ ಎಂದು

ಹೇಳಿದರು. ಆದ್ದರಿಂದ ಅವರು ಹೇಳಿದ ಹಾಗೆ ನಾವು ಚೆಕ್ ಪಾಸ್ ಮಾಡಿ ರಾಜಮ್ಮ ಅವರ ಅಕೌಂಟ್ ಗೆ 57,783/- ಚೆಕ್ ಹಣವನ್ನು ಕ್ರೇಡಿಟ್ ಮಾಡಿದೇವು.

ನಂತರ ನಮಗೆ ಹೆಡ್ ಆಫೀಸ್ ನಿಂದ ತನಿಖೆಗಾಗಿ ಚಾಸಾ-26,27 ರವರು ಬಂದಿದ್ದರು. ಆಗ ರಾಜಮ್ಮ ಕೋಂ ಜಗನ್ನಾಧ ಅವರು ಮೂಲತಃ ಚೆಕ್ ಡಿಸ್ಕ್ಯಾಂಟ್ ಗೆ ಕೊಟ್ಟಿದ್ದು ಆದರೆ ಆರೋಪಿ ರಾಜಮ್ಮ ಕೋಂ ಶಿವೇಗೌಡ ಎಂಬ ಬೇರೆ ಮಹಿಳೆ ಅಕೌಂಟ್ ಗೆ ಚೆಕ್ ಡಿಸ್ಕ್ಯಾಂಟ್ ಪ್ರೊಸೀಡ್ ಅನ್ನು ಕ್ರೇಡಿಟ್ ಕೊಡಿಸಿದ್ದರು. ಆಗ ರಾಜಮ್ಮ ಕೋಂ ಜಗನ್ನಾಥ ಅವರು ಚೆಕ್ ಡಿ ಗೆ ಕೊಟ್ಟಿದ್ದೇವು ಆದರೆ ನಮ್ಮ ಅಕೌಂಟ್ ಗೆ ಕ್ರೇಡಿಟ್ ಆಗಿಲ್ಲ ಎಂದು ದೂರು ನೀಡಿದ್ದರು.

ಅದೇ ಸಮಯ ಮ್ಯಾನೇಜರ್ ಆದ ಆರೋಪಿ ರಾಜಮ್ಮ ಕೋಂ ಶಿವೇಗೌಡ ಅಕೌಂಟ್ ಗೆ ಕ್ರೆಡಿಟ್ ನೀಡಿದ ಹಣವನ್ನು ರಾಜಮ್ಮ ಅವರ ಸಹಿ ಇದೆ ಎಂದು ಹೇಳಿ ನಮ್ಮ ಕ್ಯಾಷಿಯರ್ ಕಡೆಯಿಂದ ಸದರಿ ಹಣವನ್ನು ಡ್ರಾ ಮಾಡಿದ್ದರು. ತನಿಖೆ ವೇಳೆ ಈ ವಿಚಾರ ನಮಗೆ ಗೊತ್ತಾಗಿರುತ್ತದೆ. ಆದ್ದರಿಂದ ಆರೋಪಿ ಒಟ್ಟು 57,250/- ಹಣವನ್ನು ವಿತ್ ಡ್ರಾ ಮಾಡಿ ತನ್ನ ಅನೂಕೂಲಕ್ಕೆ ಉಪಯೋಗಿಸಿರುತ್ತಾರೆ ಎಂದು ತಿಳಿದುಬಂದಿರುತ್ತದೆ.

ಇನ್ನೊಬ್ಬ ವ್ಯಕ್ತಿ ಹೆಚ್.ಎಸ್. ವರದರಾಜು ಅವರು ನಮ್ಮ ಬ್ಯಾಂಕಿನಲ್ಲಿ ಲೋನ್ ಪಡೆದಿದ್ದು ನಮ್ಮ ಮ್ಯಾನೇಜರ್ ಆರೋಪಿ ಅವರ ಕೈಗೆ 3 ಲಕ್ಷ ನಗದು ನೀಡಿ ಅದನ್ನು ನನ್ನ ವಿವಿಧ ಲೋನ್ ಅಕೌಂಟ್ ಗೆ ಕ್ರೆಡಿಟ್ ಕೊಡಿ ಎಂದು ಕೇಳಿದ್ದು, ಆಗ ಆರೋಪಿ 2,64,000/- ಮಾತ್ರ ಸದರಿ ಹೆಚ್ ಎಸ್ ವರದರಾಜು ಅವರ ವಿವಿಧ ಲೋನ್ ಅಕೌಂಟ್ ಗೆ ಕ್ರೆಡಿಟ್ ಕೊಟ್ಟಿದ್ದು ಉಳಿದ 36,000/- ಹಣವನ್ನು ಆರೋಪಿ ದುರುಪಯೋಗಪಡಿಸಿಕೊಂಡಿರುತ್ತಾರೆ ಎಂದು ತಿಳಿದುಬಂದಿರುತ್ತದೆ.

ಮತ್ತೊಂದು ಪ್ರಕರಣದಲ್ಲಿ ಕೆಫೆ ಕೂರ್ಗ್ ಓನರ್ ಆದ ಕಾವೇರಪ್ಪ ಅವರ ಎಸ್ ಬಿ ಅಕೌಂಟ್ ನ ಕೆ.ವೈ.ಸಿ ನಿಯಮ ಪಾಲಿಸದೆ ಅಕೌಂಟ್ ಒಪನ್ ಮಾಡಿ ಸದರಿಯವರು ಕಾರ್ ಲೋನ್ ಕೇಳಿದ್ದಾರೆ ಎಂದು 6 ಲಕ್ಷ ಲೋನ್ ಸಾಂಕ್ಷನ್ ಮಾಡಿ ಪ್ರಥಮ್ ಮೋಟಾರ್ಸ್ ಎಂಬ ಹೆಸರಿನಲ್ಲಿ ಸದರಿ 6 ಲಕ್ಷ ಡಿ.ಡಿ ನೀಡಿರುತ್ತಾರೆ. ತನಿಖೆ ವೇಳೆ ಸದರಿ ಕಾವೇರಪ್ಪ ಅವರು ನಾನು ಕಾರ್ ಲೋನ್ ಕೇಳಿಲ್ಲ ನಾನು ಪರ್ಸನಲ್ ಲೋನ್ ಕೇಳಿದ್ದೆ ಎಂದು ಹೇಳಿರುತ್ತಾರೆ. ಸದರಿ ಪ್ರಕರಣದಲ್ಲಿ ಕಾರ್ ಲೋನ್ ಎಂದು ಹೇಳಿ 6 ಲಕ್ಷ ಹಣವನ್ನು ಡಿವಿಯೇಷನ್ ಮಾಡಿರುತ್ತಾರೆ.

ಮತ್ತೊಂದು ಪ್ರಕರಣದಲ್ಲಿ ಉಪ್ಪಾರ ಎಂಬುವವರು ನಮ್ಮ ಬ್ಯಾಂಕಿನ ಗ್ರಾಹಕರಾಗಿದ್ದು ಅವರು ಮೂಲತಃ ಬಿಜಾಪುರದವರಾಗಿದ್ದು ಅವರ ಒ.ಡಿ ಅಕೌಂಟ್ ನಿಂದ 25 ಲಕ್ಷ ಆರ್ ಟಿ ಜಿ ಎಸ್ ನ ಡೆಬಿಟ್ ಸ್ಲಿಪ್ ಮೂಲಕ ಆರೋಪಿ ಅವರ ಪತ್ನಿಯ ಹೆಸರಿನಲ್ಲಿರುವ ಶ್ರದ್ಧಾ ಎಂಟರ್ ಪ್ರೈಸಸ್ ಗೆ ಸದರಿ 25 ಲಕ್ಷ ಆರ್ ಟಿ ಜಿ ಎಸ್ ಮೂಲಕ ವರ್ಗಾವಣೆ ಮಾಡಿರುತ್ತಾರೆ. ಈ ರೀತಿ ಆರೋಪಿ 25 ಲಕ್ಷ ಹಣವನ್ನು

ದುರುಪಯೋಗಪಡಿಸಿಕೊಂಡು ಒಟ್ಟು 25,93,250/- ರೂ. ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

**ಪಾಟೀಸವಾಲುಃ** ಕುಮಾರಿ ಡಿ.ಹೆಚ್.ಕೆ ವರಿಕೀಲರು ಪಿ ಎಲ್ ಕೆ ವಕೀಲರ ಪರವಾಗಿ ಕಾಲಾವಕಾಶ ಕೋರಿದ್ದು ಯಾವುದೇ ಸಕಾರಣ ನೀಡಿರುವುದಿಲ್ಲ. ಪ್ರಕರಣವು 2014 ರದ್ದಾಗಿದ್ದು ಹಾಗೂ ಸಾಕ್ಷಿದಾರರು ಸಾಕ್ಷಿ ನುಡಿಯಲು ಮಂಗಳೂರಿನಿಂದ ಬಂದಿದ್ದರಿಂದ ಆರೋಪಿ ಪರ ವಕೀಲರ ಪ್ರಾರ್ಥನೆಯನ್ನು ತಿರಸ್ಕರಿಸಿ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಶಿರಿನ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.